ಅತ್ತ ಹೋದದ್ದೇ ತಡ ಅವರ ಹಿಂದೆ ಇನ್ನೂ ಹಲವರು ಆತುರಾತುರವಾಗಿ ಹೆಜ್ಜೆ ಹಾಕುತ್ತ ಹಿಂಬಾಲಿಸಿದರು. ಕೆರೆಯ ಕಡೆಗೆ ಹೊರಟವರ ಗುಂಪು ಕ್ಷಣ ಕ್ಷಣಕ್ಕೆ ದೊಡ್ಡದಾಗುತ್ತ ಹೋಯಿತು. ಹೊತ್ತು ಮುಳುಗುವುದರೊಳಗೆ ಕೆರೆಯ ಹತ್ತಿರಕ್ಕೆ ಹೋಗುವ ಧಾವಂತ ಅವರಲ್ಲಿತ್ತು. ಕೆಲವರು ದಾಪುಗಾಲು ಹಾಕುತ್ತಿದ್ದರೆ, ಇನ್ನು ಕೆಲವರು ಓಡಲು ಆರಂಭಿಸಿದರು.

ಎಷ್ಟೇ ಜೋರಾಗಿ ನಡೆದರೂ ಕೆರೆಯ ಏರಿಯ ಹತ್ರಕ್ಕೆ ಹೋಗುವಷ್ಟರಲ್ಲಿ ಸೂರ್ಯ ಮುಳುಗುವ ಸ್ಥಿತಿಯಲ್ಲಿದ್ದ. ತುಂಬಿದ ಕೆರೆಯ ಮಧ್ಯದಲ್ಲಿ ಬಣ್ಣದ ಸೀರೆ ಸುತ್ತಿದಂತೆ ಕಾಣುತ್ತಿದ್ದ ದೊಡ್ಡದೇನೊ ತೇಲುತ್ತಿದೆ! ಹೆಣ ಇರಬಹುದು. ಹೌದು ಹೆಣಗಳೇ. ಬೋರಲು ಬಿದ್ದಿವೆ. ಸಣ್ಣದು ಹೆಂಗಸಿನ ಮಗನೊ, ಮಗಳೊ ಇರಬಹುದು ಅಂತ ನೋಡಿದವರು ಊಹಿಸಿ ಅಂದಾಜು ಮಾಡಿದರು. ಆರೇಳು ಕಿಲೋಮೀಟರು ನಡೆಯುತ್ತ, ಓಡುತ್ತ ಬಂದ ಕೆಲವರಂತೂ ಏದುಸಿರು ಬಿಡುತ್ತ ಗರ ಬಡಿದವರಂತೆ ನಿಂತು ಬಿಟ್ಟರು.

ಇಷ್ಟು ದೊಡ್ಡ ಹೆಂಗಸು ನಮ್ಮೂರಲ್ಲಿ ಯಾರೂ ಇಲ್ಲ. ಯಾರಿರಬಹುದು? ಹೆಣಗಳು ಕೆರೆಯ ಮಧ್ಯದಲ್ಲಿ ನಿಂತುಬಿಟ್ಟಿವೆ! ಅದು ಹೆಂಗೆ ಸಾಧ್ಯ? ಅಲೆಗಳ ತಳ್ಳಾಟಕ್ಕೆ ಹಿಂದಕ್ಕೊ, ಮುಂದಕ್ಕೊ ಹೋಗಬೇಕಿತ್ತಲ್ಲ... ಹೀಗೆ ಒಬ್ಬೊಬ್ಬರದು ಒಂದೊಂದು ಮಾತು. ಬೆಳಕು ಕ್ರಮೇಣ ಕಡಿಮೆಯಾಗುತ್ತ ಪೂರ್ಣ ಕತ್ತಲಾಯಿತು. ತಡವಾಗಿ ಬಂದವರಿಗೆ ಹೆಣಗಳನ್ನು ನೋಡಲು ಆಗಲಿಲ್ಲ. ನೋಡಿದವರು ಹೇಳಿದ್ದನ್ನು ಕೇಳಿ ಮನಸ್ಸಿನಲ್ಲೇ ಎರಡು ಹೆಣಗಳನ್ನು ಕಲ್ಪಿಸಿಕೊಂಡರು. ಮಬ್ಬುಗತ್ತಲಲ್ಲಿ ಹೆಣಗಳು ಕಾಣಬಹುದೇ ಅಂತ ಕಣ್ಣು ಕೀಲಿಸಿಕೊಂಡು ನೋಡಿಯೇ ನೋಡಿದರು. ದಂಡೆಯ ಮೇಲೆ ನೂರಕ್ಕೂ

